ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	:	ಶ್ರೀ ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**166**
ಉತ್ತರಿಸಬೇಕಾದ ದಿನಾಂಕ	:	28.01.2026
ಉತ್ತರಿಸಬೇಕಾದ ಸಚಿವರು	:	ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೋಲಾರ ಜಿಲ್ಲೆ, ಕೋಲಾರ ನಗರದ ಹಾರೋಹಳ್ಳಿ ಬಡಾವಣೆಯಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ 2 ನೇ ಹಂತದಲ್ಲಿ ವಸತಿ ಲೇಔಟ್ ನಿರ್ಮಾಣ ಮಾಡುತ್ತಿರುವುದು ನಿಜವೇ ; (ಪೂರ್ಣ ವಿವರಗಳನ್ನು ಒದಗಿಸುವುದು)	ಹೌದು. ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ಹಾರೋಹಳ್ಳಿ ಗ್ರಾಮದ ಸರ್ವೆ ನಂಬರ್ 75 ರಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ 6 ಎಕರೆ 21 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಬಡಾವಣೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ.
ಆ)	ಈ ವಸತಿ ಬಡಾವಣೆಯನ್ನು ಯಾವಾಗಿನಿಂದ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ ; ಪ್ರಸ್ತುತ ಇದು ಯಾವ ಹಂತದಲ್ಲಿದೆ ;	ಈ ವಸತಿ ಬಡಾವಣೆಯನ್ನು ದಿನಾಂಕ:04.04.2022 ರಂದು ಪ್ರಾರಂಭಿಸಲಾಗಿದ್ದು, ಪ್ರಸ್ತುತ, ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿದ್ದು, ಬಡಾವಣೆಯ ರಸ್ತೆ, ಡಾಂಬರೀಕರಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಕಾಮಗಾರಿಗಳು ಮುಕ್ತಾಯದ ಹಂತದಲ್ಲಿರುತ್ತವೆ
ಇ)	ಈ ಲೇಔಟ್‌ನ ಕಾಮಗಾರಿಗಳನ್ನು ಪ್ರಾರಂಭಿಸಿ 4 ವರ್ಷಗಳು ಕಳೆದಿದ್ದರೂ, ಈವರೆಗೆ ಪೂರ್ಣಗೊಳಿಸದಿರುವುದರಿಂದ ಇದನ್ನು ಹೊಂದಿಕೊಂಡಂತೆಯಿರುವ ನಿವಾಸಿಗಳಿಗೆ ಬಹಳ ಕಷ್ಟಕರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಇದನ್ನು ಪೂರ್ಣಗೊಳಿಸಲಾಗುವುದು ;	ಸದರಿ ಜಮೀನಿಗೆ ಹೊಂದಿಕೊಂಡ ಖಾಸಗಿ ಭೂಮಾಲೀಕರು ಜಮೀನಿನ ಗಡಿ ಬಗ್ಗೆ ತಕರಾರು ತೆಗೆದು ಕಾಮಗಾರಿ ಪ್ರಾರಂಭಿಸಲು ಅಡ್ಡಿಪಡಿಸಿದ ಕಾರಣ, ಸಕಾಲದಲ್ಲಿ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಮಂಡಳಿಯ ಬಡಾವಣೆಗೆ ಹೊಂದಿಕೊಂಡ ನಿವಾಸಿಗಳು/ಮಾಲೀಕರು ಪದೇ ಪದೇ ಜಮೀನಿನ ಹದ್ದುಬಸ್ತು ವಿಚಾರವಾಗಿ ತಕರಾರು ತೆಗೆದು ಕಾಮಗಾರಿಗೆ ಅಡ್ಡಿಪಡಿಸುತ್ತಿದ್ದ ಕಾರಣ, ಪೊಲೀಸ್ ಇಲಾಖೆಯಿಂದ ಬಂದುಬಸ್ತು ಪಡೆದು, ತಹಶೀಲ್ದಾರ್, ಕೋಲಾರ ರವರಿಂದ ಗಡಿ ಗುರುತು ಮಾಡಿಸಿಕೊಂಡು ಕಾಮಗಾರಿ ನಿರ್ವಹಿಸಲಾಗಿದೆ. ಪ್ರಸ್ತುತ, ಬಡಾವಣೆಯ ರಸ್ತೆ, ಡಾಂಬರೀಕರಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಕಾಮಗಾರಿಗಳು ಮುಕ್ತಾಯದ ಹಂತದಲ್ಲಿರುತ್ತವೆ. ಜನವರಿ-2026 ರ ಅಂತ್ಯದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.
ಈ)	ಸದರಿ ಬಡಾವಣೆ ನಿರ್ಮಾಣಕ್ಕೆ ಎಷ್ಟು ಅನುದಾನವನ್ನು ನಿಗದಿಪಡಿಸಲಾಗಿದೆ ; ಹಾಗೂ ಇದರ ಕಾಮಗಾರಿಯನ್ನು ಯಾವ ಸಂಸ್ಥೆಯ ಮೂಲಕ ಮಾಡಲಾಗುತ್ತಿದೆ ?	ಸದರಿ ವಸತಿ ಬಡಾವಣೆಯನ್ನು ರೂ.509.00 ಲಕ್ಷಗಳ ಯೋಜನಾ ವೆಚ್ಚದಲ್ಲಿ (ಆಡಳಿತಾತ್ಮಕ ವೆಚ್ಚ ಸೇರಿದಂತೆ) ನಿರ್ಮಾಣ ಮಾಡುತ್ತಿದ್ದು, ಕಾಮಗಾರಿಯ ಗುತ್ತಿಗೆಯನ್ನು ಮೆ: ಕುಮಾರ್ ಬಿಲ್ಡ್ ಕಾನ್ ರವರಿಗೆ ಗುತ್ತಿಗೆ ಮೊತ್ತ ರೂ.324.00 ಲಕ್ಷಗಳಿಗೆ ನೀಡಲಾಗಿದೆ.

ಸಂಖ್ಯೆ :ವಇ 17 ಕೆಹೆಚ್‌ಬಿ 2026

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು